**ಸಿ.ಡಬ್ಲೂ.-01 / ಪಿ.ಡಬ್ಲೂ-01**

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 248/2024

| | | |
|---|---|---|
| ಸಾಕ್ಷಿದಾರರ ಹೆಸರು | : | ಮುತ್ತಯ್ಯ |
| ತಂದೆಯ ಹೆಸರು | : | ನಿಂಗಯ್ಯ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹುಲಿಕುರ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 16.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-2 ನನ್ನ ಮಗಳು. ಚಾಸಾ-3 ಮತ್ತು ಚಾಸಾ-4 ರವರ ಪರಿಚಯವಿರುವುದಿಲ್ಲ. ಚಾಸಾ-5 ರಿಂದ ಚಾಸಾ-7 ರವರ ಪರಿಚಯವಿರುತ್ತದೆ. ಚಾಸಾ-5 ಮತ್ತು ಚಾಸಾ-7 ರವರು ನಮ್ಮ ಪಕ್ಕದ ಜಮೀನಿನವರು. ಚಾಸಾ-6 ರವರು ಚಾಸಾ-5 ರವರ ಹೆಂಡತಿ. ಆರೋಪಿಗಳ ಪರಿಚಯವಿರುತ್ತದೆ.

ದಿನಾಂಕಃ 13.05.2024 ರಂದು ಬೆಳಿಗ್ಗೆ ಸುಮಾರು 10.00-11.00 ಗಂಟೆ ಸಮಯದಲ್ಲಿ ನಾನು ಹಾಗು ನನ್ನ ಮಗಳದಾದ ಚಾಸಾ-2 ರವರು ಹೆಗ್ಗಡಾಪುರ ಗ್ರಾಮದ ನಮಗೆ ಸೇರಿದ ಸ.ನಂ. 10ರ ಲ್ಲಿನ 04 ಎಕರೆ ಜಮೀನಲ್ಲಿ ಗಿಡ-ಗಂಟಿಗಳನ್ನು ತೆಗೆಯುತ್ತಿದ್ದಾಗ ಆರೋಪಿಗಳು ಬಂದು ಜಮೀನಿನಲ್ಲಿ ಗಿಡ-ಗಂಟಿಗಳನ್ನು ತೆಗೆಯಬೇಡಿ ಎಂದು ಗಲಾಟೆ ಮಾಡಿ 2 ನೇ ಆರೋಪಿ ಮಚ್ಚಿನಿಂದ ನನ್ನ ತಲೆಯ ಎಡ ಭಾಗಕ್ಕೆ ಹಲ್ಲೆ

ಮಾಡಿರುತ್ತಾನೆ. ಅಲ್ಲದೇ 4 ನೇ ಆರೋಪಿ ದೊಣ್ಣೆಯಿಂದ ನನ್ನ ತಲೆಯ ಬಲ ಭಾಗಕ್ಕೆ ಹಲ್ಲೆ ಮಾಡಿದ್ದು ನನ್ನ ತಲೆಗೆ ರಕ್ತಗಾಯವಾಗಿರುತ್ತದೆ. ಅದೇ ಸಮಯದಲ್ಲಿ 4 ನೇ ಆರೋಪಿ ನನ್ನ ಮಗಳಾದ ಚಾಸಾ-2 ರವರ ಜುಟ್ಟನ್ನು ಹಿಡಿದು ಎಳೆದಾಡಿರುತ್ತಾರೆ. ನಂತರ ಅಲ್ಲಿಗೆ ಯಾರೋ ಬಂದು ನನ್ನನ್ನು ಆಟೋದಲ್ಲಿ ಹೆಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತಾರೆ. ನಂತರ ಅಲ್ಲಿಗೆ ಪೋಲೀಸರು ಬಂದು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡು ಹೋಗಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ಮೇಲೆ ಹೇಳಿದಂತೆ ಪೋಲೀಸರು ನನ್ನನ್ನು ವಿಚಾರಿಸಿ ಬರೆದುಕೊಂಡ ಹೇಳಿಕೆ ದೂರು ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಹೇಳಿಕೆ ದೂರನ್ನು **ನಿ.ಪಿ.-1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-1(ಎ)** ಎಂದು ಗುರುತಿಸಲಾಯಿತು. ಮರುದಿನ ಪೋಲೀಸರು ಕೃತ್ಯ ಸ್ಥಳಕ್ಕೆ ಬಂದಿದ್ದು ನಾನು ಪೋಲೀಸರಿಗೆ ಕೃತ್ಯ ಸ್ಥಳವನ್ನು ತೋರಿಸಿಕೊಟ್ಟಿರುತ್ತೇನೆ. ಅಲ್ಲಿ ಪೋಲೀಸರು ಮಹಜರ್ ಬರೆದುಕೊಂಡು ಹೋಗಿರುತ್ತಾರೆ. ಸಾಕ್ಷಿಯು ನ್ಯಾಯಾಲಯ ಮುಂದೆ ಇರುವ 01 ದೊಣ್ಣೆ ಹಾಗು ಮಚ್ಚನ್ನು ನೋಡಿ ಅವುಗಳಿಂದಲೇ ಆರೋಪಿತರು ಹಲ್ಲೆ ಮಾಡಿರುವುದಾಗಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಮೇರೆಗೆ ದೊಣ್ಣೆಯನ್ನು ಮುದ್ದೆಮಾಲು-1 ಎಂದು, ಮಚ್ಚನ್ನು ಮುದ್ದೆಮಾಲು-2 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 4 ನೇ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. 5 ನೇ ಆರೋಪಿ ಗೈರು ಹಾಜರಾಗಿದ್ದು, ಅವರ ಪರ ವಕೀಲರು

ಹಾಜರಾತಿ ವಿನಾಯಿತಿಯ ಅರ್ಜಿಯನ್ನು ಸಲ್ಲಿಸಿದ್ದು 5ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

***(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಸದರಿ ದಿನದಂದು ಅಂದರೆ ದಿನಾಂಕಃ 13.05.2024 ರಂದು ಬೆಳಿಗ್ಗೆ ಸುಮಾರು 11.00 ಗಂಟೆ ಸಮಯದಲ್ಲಿ ನಾನು ಹಾಗು ನನ್ನ ಮಗಳಾದ ಚಾಸಾ-2 ರವರು ನಮ್ಮ ಸ.ನಂ. 10 ರಲ್ಲಿನ 04 ಎಕರೆ ಜಮೀನಿ ಪೈಕಿ ಪಾಳು ಬಿದ್ದ 02 ಎಕರೆ ಜಮೀನಿನಲ್ಲಿ ಗಿಡ-ಗಂಟಿಗಳನ್ನು ಕ್ಲೀನ್ ಮಾಡುತ್ತಿದ್ದಾಗ 3 ನೇ ಆರೋಪಿಯು ತನ್ನ ತಾಯಿಯಾದ 4 ನೇ ಆರೋಪಿಯನ್ನು ಕರೆದುಕೊಂಡು ಬಂದು ನನ್ನ ಬಳಿ ಇಲ್ಲಿ ಏಕೆ ಕ್ಲೀನ್ ಮಾಡುತ್ತಿದ್ದೀರಾ ಎಂದು ಬೈದು ಹೊರಟು ಹೋಗಿದ್ದು ನಂತರ ಮಧ್ಯಾಹ್ನ 01.00 ಗಂಟೆ ಸಮಯದಲ್ಲಿ 1ನೇ ಆರೋಪಿಯು ಬಂದು ನನ್ನಲ್ಲಿ ಇಲ್ಲಿ ಏಕೆ ಕ್ಲೀನ್ ಮಾಡುತ್ತಿದ್ದೀರಾ ಇಲ್ಲಿಂದ ಹೋಗದೇ ಇದ್ದರೆ ನನ್ನ ಕಿರಿಯ ಮಗ ಜ್ಯೋತಿ ಕುಮಾರ್ ನನ್ನು ಕರೆಯಿಸಿ ನಿಮ್ಮನ್ನು ಮುಗಿಸಿ ತಿಥಿ ಮಾಡುತ್ತೇವೆಂದು ಜಗಳ ತೆಗೆದು ಕೆಟ್ಟದಾಗಿ ಬೈದು ನನ್ನ ಬನಿಯನ್ ಹಿಡಿದು ಎಳೆದಾಡಿ ಹರಿದು ಹಾಕಿ 01 ಗಂಟೆ ಇಲ್ಲಿಯೇ ಇರಿ ನನ್ನ ಮಗ ಜ್ಯೋತಿಕುಮಾರ್ ನನ್ನು ಕರೆದುಕೊಂಡು ಬರುತ್ತೇವೆಂದು ಹೊರತು ಹೋಗಿರುತ್ತಾರೆಂದರೆ ಸರಿ. ನಂತರ ಮಧ್ಯಾಹ್ನ ಸುಮಾರು 02.30 ಗಂಟೆ ಹೊತ್ತಿಗೆ ಆರೋಪಿಗಳೆಲ್ಲರೂ ಬಂದು ನಾನು ಮೇಲೆ ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಗಲಾಟೆ ಮಾಡಿ ಹಲ್ಲೆ ಮಾಡಿರುತ್ತಾರೆಂದರೆ ಸರಿ.

ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಒಂದು ಬನಿಯನ್ ಅನ್ನು ತೋರಿಸಿ ಕೃತ್ಯ ಸಮಯದಲ್ಲಿ ತಾನು ಧರಿಸಿದ್ದ ಬನಿಯನ್ ಇದೇ ಅಲ್ಲವೇ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಒಪ್ಪಿಕೊಂಡ ಮೇರೆಗೆ ಸದರಿ ಬನಿಯನ್ ಅನ್ನು ಅಭಿಯೋಜನೆಯ ಪರ **ಮುದ್ದೆಮಾಲು-3** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಬಿ.ಎಲ್.ಟಿ. ವಕೀಲರಿಂದಃ**

ನಾನು ಹುಲಿಕುರ ಗ್ರಾಮದಲ್ಲಿ ವಾಸವಿದ್ದು ಆರೋಪಿತರು ಹೆಗ್ಗಡಾಪುರ ಗ್ರಾಮದಲ್ಲಿ ವಾಸವಿರುತ್ತಾರೆ. ಸ.ನಂ.10 ರಲ್ಲಿನ 04 ಎಕರೆ ಜಮೀನು ಹೆಗ್ಗಡಾಪುರ ಗ್ರಾಮದಲ್ಲಿ ಇರುತ್ತದೆ. ಹೆಗ್ಗಡಾಪುರದಿಂದ ಹುಲಿಕುರ ಗ್ರಾಮಕ್ಕೆ ಎಷ್ಟು ಕಿ.ಮೀ. ಇರುತ್ತದೆಂದು ನನಗೆ ಗೊತ್ತಿರುವುದಿಲ್ಲ. ಸ.ನಂ. 10 ರಲ್ಲಿರುವ 04 ಎಕರೆ ಜಮೀನು ನನ್ನ ಅಜ್ಜಿಯಾದ ಬಸಮ್ಮರವರ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯು ನನಗೆ ವಿಭಾಗ ಪತ್ರದ ಮೂಲಕ ಬಂದಿರುತ್ತದೆ. ಆ ಬಗ್ಗೆ ದಾಖಲಾತಿ ಇರುತ್ತದೆ. ಅದು ನೋಂದಣಿಯಾಗಿರುವುದಿಲ್ಲ. ಆ ರೀತಿ ಯಾವುದೇ ವಿಭಾಗ ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಹುಲಿಕುರ ಗ್ರಾಮದಲ್ಲಿಯೂ ಸಹ ನನಗೆ 02 ಎಕರೆ 10 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನನ್ನು ನನ್ನ ಅಜ್ಜಿ ಬಸಮ್ಮನವರು ಜೀವನಾಂಶಕ್ಕೆ ಇಟ್ಟುಕೊಂಡಿದ್ದರು. ಆ ಬಗ್ಗೆ ದಾಖಲೆ ಇರುತ್ತದೆ. ಸದರಿ ಜಮೀನನ್ನು ಬಸಮ್ಮನವರು ಜೀವನಾಂಶಕ್ಕೆ ಇಟ್ಟುಕೊಂಡಿರುವುದಿಲ್ಲ ಹಾಗು ಅದು ಸಹ ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಸನಪುರ ಗ್ರಾಮದ ಸ.ನಂ. 10ರ 04 ಎಕರೆ ಜಮೀನಿಗೆ ಸಂಬಂಧಪಟ್ಟಂತೆ

ಹೆಚ್.ಡಿ. ಕೋಟೆಯ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ: 208/2015 ರಂತೆ ದಾವೆ ಇದ್ದಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಸಾಕ್ಷಿ ನುಡಿದಿರುತ್ತೇನೆಂದರೆ ಸರಿಯಲ್ಲ. ಸದರಿ ದಾವೆ ದಿನಾಂಕಃ 16.02.2024 ರಂದು ವಜಾ ಆಗಿರುತ್ತದೆಂದರೆ ಸರಿ. ನಮಗು ಹಾಗು ಆರೋಪಿಗಳಿಗು ಮೊದಲಿನಿಂದಲೂ ಜಮೀನಿನ ವಿಚಾರದಲ್ಲಿ ವೈಮನಸ್ಸು ಇರುತ್ತದೆಂದರೆ ಸರಿ.

ಸದರಿ ಘಟನೆಯ ದಿನ ನಾನು ಜಮೀನಿನ ಬಳಿ ಬೆಳಿಗ್ಗೆ ಸುಮಾರು 11.00 ಗಂಟೆಗೆ ಹೋಗಿದ್ದು ಮಧ್ಯಾಹ್ನ ಸುಮಾರು 03.00 ಗಂಟೆಯವರೆಗೆ ಅಂದರೆ ನಾನು ಆಸ್ಪತ್ರೆಗೆ ದಾಖಲಾಗುವವರೆಗೂ ಅಲ್ಲಿಯೇ ಇದ್ದಿರುತ್ತೇನೆ. ನಾನು ಜಮೀನಿನ ಬಳಿ ಹೋದಾಗ ಅಲ್ಲಿಗೆ ಮೊದಲು 3 ಹಾಗು 4 ನೇ ಆರೋಪಿಗಳು ಇದ್ದು ನಂತರ 1 ನೇ ಆರೋಪಿ ಬಂದು ಅಲ್ಲಿಗೆ 2 ನೇ ಆರೋಪಿಯನ್ನು ಸಹ ಕರೆದುಕೊಂಡು ಬಂದಿರುತ್ತಾರೆ. ಆ ಸಮಯದಲ್ಲಿ ನಮ್ಮ ಪಕ್ಕದ ಜಮೀನಿನವರಾದ ಚಾಸಾ-5 ಹಾಗು ಚಾಸಾ-6 ರವರು ಇದ್ದಿರುತ್ತಾರೆ. ನಾನು ಸದರಿ ದಿನದಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಜಮೀನಿನ ಬಳಿ ಹೋಗಿಯೇ ಇರುವುದಿಲ್ಲ ಹಾಗು ಘಟನೆ ನಡೆಯಲಾಯಿತು ಎಂದು ಹೇಳಿದ ಸಮಯದಲ್ಲಿ ಅಲ್ಲಿ ಚಾಸಾ-5 ಮತ್ತು ಚಾಸಾ-6 ರವರು ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ದಾಸನಪುರದಲ್ಲಿ ವಾಸವಿರುವುದರಿಂದ ಸದರಿ ಸ.ನಂ. 10 ರ 04 ಎಕರೆ ಜಮೀನನ್ನು ಆರೋಪಿಗಳೇ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೆಂದರೆ ಸರಿಯಲ್ಲ. ನಾನು ಸದರಿ ಜಮೀನಿನಲ್ಲಿ ಯಾವುದೇ ವ್ಯವಸಾಯ ಮಾಡದೇ ಇದ್ದುದರಿಂದ ಅಲ್ಲಿಗೆ ಹೋಗುವ ಹಾಗು ಅಲ್ಲಿ ಗಿಡ-ಗಂಟೆಗಳನ್ನು ಕ್ಲೀನ್ ಮಾಡುವ ಪ್ರಮೇಯವೇ

ಬಂದಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-5 ಹಾಗು ಚಾಸಾ-6 ರವರು ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ನಾವು ಹಾಗು ಚಾಸಾ-5 ಮತ್ತು ಚಾಸಾ-6 ರವರು ಅನ್ಯೋನ್ಯವಾಗಿರುತ್ತೇವೆಂದರೆ ಸಾಕ್ಷಿಯು ಅವರು ನಮ್ಮ ಪಕ್ಕದ ಜಮೀನಿನವರಾಗಿದ್ದು ಚೆನ್ನಾಗಿರುತ್ತೇವೆಂದು ನುಡಿಯುತ್ತಾರೆ. ಸದರಿ ಜಮೀನಿನ ಅಕ್ಕ-ಪಕ್ಕ ಚಾಸಾ-5 ಮತ್ತು ಚಾಸಾ-6 ರವರಿಗೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಬೆಳಿಗ್ಗೆ 11.00 ಗಂಟೆಗೆ ಬಂದು ಆರೋಪಿಗಳು ಗಲಾಟೆ ಮಾಡಿದ್ದರು ಎಂದು ಹೇಳಲಾದ ಸಮಯದಲ್ಲಿ ಪೋಲೀಸರಿಗೆ ದೂರನ್ನು ನೀಡಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ಆಗ ದೊಡ್ಡ ಗಲಾಟೆ ಏನು ನಡೆದಿಲ್ಲ ಕೇವಲ ಬಾಯಿ ಮಾತಿನ ಸಣ್ಣ-ಪುಟ್ಟ ಗಲಾಟೆ ನಡೆದಿದ್ದು ಅದಕ್ಕಾಗಿ ಆಗ ದೂರು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಬೆಳಿಗ್ಗೆ 11.00 ಗಂಟೆಗೆ ಗಲಾಟೆಯಾದ ಸಮಯದಲ್ಲಿ ಊರಿನವರು ಯಾರು ಇದ್ದಿರಲಿಲ್ಲ. ಮತ್ತೆ ಆರೋಪಿಗಳು ಮಧ್ಯಾಹ್ನ ಸುಮಾರು 02.30-03.00 ಗಂಟೆಗೆ ಬಂದು ಗಲಾಟೆ ಮಾಡಿರುತ್ತಾರೆ. ಸದರಿ ದಿನದಂದು ನಾನು ಸದರಿ ಜಮೀನಿನ ಬಳಿ ಹೋಗಿರುವುದಿಲ್ಲ ಹಾಗು ಅಲ್ಲಿಗೆ ಆರೋಪಿತರು ಬಂದು ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಯಾವುದೇ ಗಲಾಟೆ ಮಾಡಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಎಲ್ಲೆಲ್ಲಿಗೆ ಹಲ್ಲೆ ಮಾಡಿರುತ್ತಾರೆಂದು ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. 2 ನೇ ಆರೋಪಿಯು ನನಗೆ ಮಚ್ಚಿನಿಂದ ತಲೆಯ ಎಡಭಾಗಕ್ಕೆ ಹಲ್ಲೆ ಮಾಡಿರುತ್ತಾನೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಯಾವುದೇ ಆರೋಪಿಗಳು ನನಗಾಗಲೀ ಅಥವಾ ನನ್ನ ಮಗಳಾದ ಚಾಸಾ-2 ರವರಿಗೂ ಸಹ ಹಲ್ಲೆ ಮಾಡಿರುವುದಿಲ್ಲ ಬದಲಾಗಿ ನಮ್ಮ ಹಾಗ

ಆರೋಪಿಗಳ ನಡುವೆ ಜಮೀನಿನ ಸಂಬಂಧ ಹಳೆಯ ವೈಷಮ್ಯವಿದ್ದು ಆ ಹಿನ್ನೆಲ್ಲೆಯಲ್ಲಿ ನಾನು ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಆಸ್ಪತ್ರೆಲ್ಲಿ ನಾನು ಚಿಕಿತ್ಸೆ ಪಡೆಯುತ್ತಿರುವಾಗ ಪೋಲೀಸರು ಬಂದು ನನ್ನನ್ನು ವಿಚಾರಿಸಿ ಹೇಳಿಕೆ ದೂರು ದಾಖಲಿಸಿಕೊಂಡಿರುತ್ತಾರೆ. ಆಗ ಬೇರೆ ಯಾರು ಇದ್ದಿರಲಿಲ್ಲ. ಮುದ್ದೆಮಾಲು-1 ರಿಂದ ಮುದ್ದೆಮಾಲು-3 ಅನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಆರೋಪಿಗಳು ನಮ್ಮ ವಿರುದ್ಧವೂ ಸಹ ಪೋಲೀಸರಿಗೆ ದೂರನ್ನು ನೀಡಿದ್ದು ಸದರಿ ಪ್ರಕರಣವು ಸಹ ಈ ನ್ಯಾಯಾಲಯದಲ್ಲಿ ಸಿ.ಸಿ. ಸಂಖ್ಯೆ: 249/2024 ರಂತೆ ಇತ್ಯರ್ಥಕ್ಕೆ ಬಾಕಿ ಇರುತ್ತದೆಂದರೆ ಸರಿ.

**ಮರು ವಿಚಾರಣೆ: ಇರುವುದಿಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**